**ಇ..ಸಿ.ಎ ನಂಃ 5/2023**
**ಪಿ.ಡಬ್ಲ್ಯೂಃ1,**

**ದಿನಾಂಕ : 23-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ ಬಿ ಎಸ್ ಕೆ ಎದುರುದಾರ ಪರ ವಕೀಲರಿಂದ :**

ನಾನು ಪಿ.ಯು.ಸಿ. ತನಕ ಓದಿದ್ದೇನೆ. ಸಿಂಧಗಿಯಲ್ಲಿರುವ ಎಚ್.ಜಿ. ಕಾಲೇಜಿನಲ್ಲಿ ಓದಿರುತ್ತೇನೆ. ನನ್ನ ಊರು ಬೇಲೂರು ಗ್ರಾಮ. ಅಪಘಾತದ ಬಗ್ಗೆ ನಾನೇ ದೂರು ಕೊಟ್ಟಿರುತ್ತೇನೆ. ದೂರಿನಲ್ಲಿ ಬರೆದ ವಿಷಯ ಗೊತ್ತು. ದೂರಿನಲ್ಲಿ ಬರೆದ ಸಂಗತಿ ಗೊತ್ತಿಲ್ಲ. ಪೋಲಿಸರು ನನಗೆ ಓದಿ ಹೇಳಿಲ್ಲಾ. ಲಾರಿ ಮೇಲೆ ಕೇಸ ಹಾಕಿದ ಪ್ರಕರಣದಲ್ಲಿ ಸಾಕ್ಷಿ ನುಡಿದಿಲ್ಲ. ಆಸ್ಪತ್ರೆಯಲ್ಲಿ ದೂರಿಗೆ ಸಹಿ ಮಾಡಿದ್ದೇನೆ. ಪೋಲಿಸರಿಗೆ ಅಪಘಾತ ಕುರಿತು ಮಾಹಿತಿ ನೀಡಿದ್ದೇನೆ, ಪೋಲಿಸರಿಗೆ ನನ್ನ ಹೆಸರು, ಉದ್ಯೋಗ ತಿಳಿಸಿದ್ದೇನೆ. ದೂರಿನಲ್ಲಿ ನನ್ನ ವಯಸ್ಸು 42 ಅಂತಾ ಬರೆದಿದ್ದು ಸರಿ ಇದೆ. ನನ್ನ ಊರು ಬೇಲೂರು ಸರಿ ಇದೆ. ದೂರಿನಲ್ಲಿ ನನ್ನ ಉದ್ಯೋಗ ಒಕ್ಕಲುತನ ಅಂತಾ ಬರೆದಿದೆ ಎಂದರೆ ಸರಿಯಲ್ಲ. ಪೋಲಿಸರು ತಪ್ಪಾಗಿ ನನ್ನ ಉದ್ಯೋಗ ಬರೆದಿದ್ದಾರೆ. ನಿಪಿ-2 ದೂರಿನಲ್ಲಿ ಬರೆದ ಸಂಗತಿಗಳನ್ನು ಓದಿಲ್ಲಾ. ಅಪಘಾತ ದಿನದಂದು ಕಲಬುರಗಿಯ ಕಣ್ಣಿ ಮಾರ್ಕೇಟಗೆ ಹೋಗಿದ್ದೆ, ನನ್ನ ಜೊತೆಗೆ ಲಗಮಣ್ಣ, ಪರಶುರಾಮ, ಸಾತಪ್ಪ ಇದ್ದರು. ನಾವು ಮೆಣಸಿನಕಾಯಿ ನ್ನು ಲಾರಿಯಲ್ಲಿ ಲೋಡ ಮಾಡಿಕೊಂಡು ಹೋಗಿದ್ದೇವು. ಪೋಲಿಸರು ಮುಂದೆ ಮೆಣಸಿನಕಾಯಿ ನ್ನು ಲಾರಿಯಲ್ಲಿ ಲೋಡ ಮಾಡಿಕೊಂಡು ಹೋಗಿದ್ದೇವು ಎಂದು ಹೇಳಿಕೆ ನೀಡಿದ್ದೀರಾ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲಾ. ಲಗಮಣ್ಣ ಮತ್ತು ಸಾತಪ್ಪ ನಮ್ಮ ಊರಿನವರು. ಲಾರಿ ಚಾಲಕ ಬಾಳಪ್ಪ ಅಂತಾ ಇದ್ದರು. ಪೋಲಿಸರು ಮುಂಚೆ ಲಾರಿ ಚಾಲಕ ಬಾಳಪ್ಪ ಅಂತಾ ತಿಳಿಸಿದ್ದೇನೆ. ಲಾರಿಯ

ಮಾಲಿಕ ಅಮಗೊಂಡ ಯಾವ ಊರಿನವರು ಅಂತಾ ಗೊತ್ತಿಲ್ಲಾ. ನಾನು ದುಡಿದ ಮೇಲೆ ಸಂಬಳವನ್ನು ಮಾಲಿಕ ನೀಡುತ್ತಾನೆ. ಮಾಲಿಕ ಎಲ್ಲಿರುತ್ತಾನೆ ಎಂದು ಗೊತ್ತಿಲ್ಲ. ನಾನು ಮಾಲಿಕ ಬಳಿ ಕೆಲಸಕ್ಕೆ ಸೇರಿ ಇನ್ನು ಒಂದು ತಿಂಗಳು ಆಗಿಲ್ಲ , ಆದಕಾರಣ ಇನ್ನು ಸಂಬಳ ನೀಡಿಲ್ಲಾ. ನನಗೆ ಮತ್ತು ಲಾರಿ ಮಾಲಿಕನಿಗೆ ಮಾಲಿಕ ಮತ್ತು ನೌಕರ ಅಂತಾ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಲಾರಿ ಮಾಲಿಕ ವಿಜಯಪುರದಲ್ಲಿದ್ದು ನಾನು ಕಲಬುರಗಿಯಲ್ಲಿ ವಾಸ ಇದ್ದ ಕಾರಣ ನನಗೆ ಮತ್ತು ಲಾರಿ ಮಾಲಿಕ ಜೊತೆಗೆ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ.

ನಿಪಿ-2 ಪ್ರಕಾರ ನಾವು ಕಣ್ಣಿ ಮಾರ್ಕೇಟಗೆ ಮೆಣಸಿಕಾಯಿನ್ನು ಮಾರಾಟ ಮಾಡಿ ನಾವು ಮರಳಿ ಊರಿಗೆ ಹೋಗುವ ಸಲುವಾಗಿ ನಿಂತಾಗ ಲಾರಿಯಲ್ಲಿ ಏರಿದೇವು ಎಂದು ದೂರಿನಲ್ಲಿ ಬರೆದಿದೆ ಎಂದರೆ ಸರಿಯಲ್ಲ . ಆ ದಿನ ನಾವು ಲಾರಿಯಲ್ಲಿ ಅನಧಿಕೃತವಾಗಿ ಪ್ರಯಾಣ ಮಾಡಿದ್ದೇವು ಎಂದರೆ ಸರಿಯಲ್ಲ. ನನಗೆ ಮತ್ತು ಲಾರಿ ಮಾಲಿಕನಿಗೆ ಯಾವುದೇ ಮಾಲಿಕ ಮತ್ತು ನೌಕರ ಸಂಬಂಧ ಇಲ್ಲಾ ಪರಿಹಾರ ಪಡೆಯಲು ದೂರಿನಲ್ಲಿ ಬರೆದ ಸಂಗತಿಗಳು ಗೊತ್ತಿದ್ದರು ಗೊತ್ತಿಲ್ಲಾ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಅಪಘಾತದ ಅಂತಿಮ ವರದಿಯನ್ನು ಲಾರಿ ಚಾಲಕನ ಮೇಲೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಲಾರಿಗೆ ಯಾವುದೇ ವಿಮೆ ಇಲ್ಲದ ಕಾರಣ ಟಾಟಾ ಏಸ ವಾಹನದಲ್ಲಿ ಕ್ಲೀನರ್ ಎಂದು ಕೆಲಸ ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು 1ನೇ ಎದುರುದಾರ ಬಳಿ ಕ್ಲೀನರ ಎಂದು ಕೆಲಸ ಮಾಡುತ್ತಿದ್ದು ನನಗೆ ತಿಂಗಳಿಗೆ

**ಇ..ಸಿ.ಎ ನಂಃ 5/2023**
**ಪಿ.ಡಬ್ಲ್ಯೂಃ1,**

ರೂ.30,000/- ನೀಡುತ್ತಿದ್ದು ಮತ್ತು ದಿನಕ್ಕೆ ರೂ.300/- ಭತ್ಯೆ ನೀಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1ನೇ ಎದುರುದಾರ ಕಣ್ಣಿ ಮಾರ್ಕಟೆ ಹೋಗಿ ಮೆಣಸಿಕಾಯಿ ಮಾಡಿಕೊಂಡು ಬರಲು ತಿಳಿಸಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಸಂಗತಿಯನ್ನು ನಾನು ಪೋಲಿಸರು ಮುಂದೆ ನಾನು ಹೇಳಿಲ್ಲ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ನನ್ನ ಮನೂರು ಆಸ್ಪತ್ರೆ ಸೇರಿದರು ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ 15 ದಿನ ಒಳರೋಗಿಯಾಗಿದ್ದೆ. ನನ್ನ ಕೈ ಮತ್ತು ಕಾಲಿನಿ ಮೂಳೆ ಮುರಿತ ಆದರೂ ಸಹ ಈಗ ಸರಿಯಾಗಿ ಜೋಡಣೆ ಆಗಿ ಈಗ ಮೊದಲಿನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗ ನೂನ್ಯತೆ ಇಲ್ಲಾ ವೈದ್ಯರ ಬಳಿ ಹೋಗಿ ಸುಳ್ಳು ಅಂಗ ನೂನ್ಯತೆ ಬರೆಸಿಕೊಂಢು ಬಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು 1ನೇ ಎದುರುದಾರ ಬಳಿ ಯಾವುದೇ ನೌಕರ ಮತ್ತು ಮಾಲಿಕ ಸಂಬಂಧ ಇಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ :ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**